**(ಆ) ರಾಯಚೂರು ಜಿಲ್ಲೆ ಮಾನ್ವಿ ತಾಲ್ಲೂಕು ಸಿದುವಾರದಲ್ಲಿ ರೈತರ ಮೇಲೆ ಗೋಲಿಬಾರ್**

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೆ, ನೆನ್ನೆ ದಿವಸ ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಸಿದುವಾರ ಡಿವಿಜನ್‌ನಲ್ಲಿ ರೈತರ ಮೇಲೆ ಪೊಲೀಸರು ಗೋಲಿಬಾರ್ ಮಾಡಿದ್ದಾರೆ. ಅಲ್ಲಿ 20 ಜನರಿಗೆ ಗಾಯಗಳಾಗಿವೆ. ಇದಕ್ಕೆ ಕಾರಣ ಏನೆಂದರೆ ತುಂಗಭದ್ರ ಎಡದಂಡೆ ಕಾಲುವೆಯ ಕೊನೆಯ ಭಾಗದಲ್ಲಿರತಕ್ಕಂಥ ರೈತರಿಗೆ ತಮ್ಮ ಗದ್ದೆಯಲ್ಲಿ ಬೆಳೆದು ನಿಂತಿರತಕ್ಕ ಬೆಳೆಗೆ ನೀರಿಲ್ಲ ಎಂದು ರೈತರು ರಸ್ತಾರೋಕೋ ಮತ್ತು ಪ್ರತಿಭಟನೆ ಮಾಡುವ ಸಂದರ್ಭದಲ್ಲಿ ಪೊಲೀಸ್‌ನವರು ಅವರ ಮೇಲೆ ಗೋಲಿಬಾರ್ ಮಾಡಿರುವ ಪರಿಣಾಮದಿಂದಾಗಿ 20 ಜನರಿಗೆ ಗಾಯಗಳು ಆಗಿವೆ ಎಂದು ಸುದ್ದಿ ಬಂದಿದೆ. ಈ ಸಮಸ್ಯೆ ನಿರಂತರವಾಗಿ ಒಂದು ವಾರದಿಂದ ಉದ್ಭವವಾಗಿದೆ. ಗೇಜ್ ಮೈಂಟೇನ್ ಮಾಡುವುದರಲ್ಲಿ ಸರ್ಕಾರಿ ಅಧಿಕಾರಿಗಳು ವಿಫಲರಾಗಿ ಟೇಲ್ ಎಂಡರ್ಸ್‌ಗೆ ನೀರು ಹೋಗದೆ ಒಂದು ಎಕರೆಗೆ 6 ಸಾವಿರದಿಂದ 8 ಸಾವಿರದವರೆಗೆ ಬಂಡವಾಳ ಹಾಕಿರತಕ್ಕಂಥ ರೈತರು ಇವತ್ತು ಒಣಗಿ ಹೋಗುತ್ತಿರುವ ಅವರ ಬೆಳೆಗೆ ನೀರನ್ನು ಒದಗಿಸುವಂತೆ ರೈತರು ಒತ್ತಾಯ ಮಾಡಿದರೂ ನೀರನ್ನು ಒದಗಿಸದೆ ಅವರ ಮೇಲೆ ಗೋಲಿಬಾರ್ ನಡೆಸಿರುವುದು ಅಮಾನುಷವಾದಂಥ ಕೃತ್ಯ, ಈ ಸರ್ಕಾರದ ಬೇಜವಾಬ್ದಾರಿತನ. ಒಂದು ಕಡೆ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಇನ್ನೊಂದು ಕಡೆ ಇವರು ಗೋಲಿಬಾರ್ ಮಾಡುತ್ತಾರೆ ಏನಾಗಿದೆ ನಿಮಗೆ? ರೈತರ ಹೆಸರನ್ನು ಹೇಳಿಕೊಂಡು ಬಂದ ಸರ್ಕಾರ, ರೈತರ ಮೇಲೆ ದಿನನಿತ್ಯ ಈ ರೀತಿ ಮಾಡುವುದಕ್ಕೆ ಏನು ಕಾರಣ? ಈ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಏನಾದರೂ ಕ್ರಮವನ್ನು ತೆಗೆದುಕೊಂಡಿದ್ದೀರಾ? ತುಂಗಭದ್ರ ಎಡದಂಡೆ ಕಾಲುವೆಯದು ಪ್ರತಿ ವರ್ಷ ಇದೇ ಸಮಸ್ಯೆಯಾಗಿದೆ. ಮಾನ್ಯ ಪ್ರಕಾಶ್‌ರವರಿಗೂ ಗೊತ್ತಿದೆ. ಬಳ್ಳಾರಿ ಜಿಲ್ಲೆಯಲ್ಲಿಯೂ ಕೂಡ ಅದೇ ಸಮಸ್ಯೆ, ಪ್ರತಿ ವರ್ಷ ಟೇಲ್ ಎಂಡರ್ಸ್‌ಗೆ ತೊಂದರೆ ಬಂದಿದೆ. ಸನ್ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ಸರ್ಕಾರವನ್ನು ಕೇಳುತ್ತೇನೆ; ಆ ಗೋಲಿಬಾರ್‌ಗೆ ಕಾರಣ ಏನು? ಅಲ್ಲಿ ಅಧಿಕಾರಿಗಳು ಯಾರು ಇದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಟೇಲ್‌ಎಂಡ್‌ನಲ್ಲಿರತಕ್ಕಂಥ ರೈತರು ಯಾವ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ ಎಂಬುದನ್ನು ನೋಡಬೇಕು. ಸಾವಿರಾರು ರೂಪಾಯಿಗಳ ಬಂಡವಾಳ ಹಾಕಿ ಫಸಲು ನಷ್ಟವಾಗಿರತಕ್ಕಂಥ ಪರಿಸ್ಥಿತಿಯಲ್ಲಿ ಮತ್ತು ಅವರು ಸಾವು-ನೋವಿನಲ್ಲಿರತಕ್ಕಂಥ ಪರಿಸ್ಥಿತಿಯಲ್ಲಿ ಅವರಿಗೆ ತಕ್ಷಣ ಟೇಲ್‌ಎಂಡರ್ಸ್‌ಗೆ ನೀರನ್ನು ಒದಗಿಸತಕ್ಕಂಥ ಕ್ರಮವನ್ನು ಸರ್ಕಾರ ಮಾಡಬೇಕು. ಅಲ್ಲಿನ ಪರಿಸ್ಥಿತಿಯನ್ನು ನಿವಾರಿಸಬೇಕು. ರೈತರು ಕಾನೂನನ್ನು ತಮ್ಮ ಕೈಗೆ ತೆಗೆದುಕೊಳ್ಳತಕ್ಕಂಥ ಅವಕಾಶವನ್ನು ಕೊಡಬಾರದೆಂದು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು: ಸರ್ಕಾರದ ಪರವಾಗಿ ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಉತ್ತರ ಕೊಡಿ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀ ರಾಮರೆಡ್ಡಿಯವರು ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ದಿವಸವೇ ನಾನು ಸಂಬಂಧಪಟ್ಟರತಕ್ಕಂಥ ಸೂಪರಿಂಟೆಂಡೆಂಟ್ ಆಫ್ ಪೊಲೀಸ್, ರಾಯಚೂರಿಗೆ ಮತ್ತು ಅಲ್ಲಿನ ಇರಿಗೇಷನ್ ಇಲಾಖೆಗೆ ಮಾತನಾಡಿ ನಾಳೆಯೊಳಗಾಗಿ ಅವರಿಗೆ ಉತ್ತರವನ್ನು ಒದಗಿಸಿಕೊಡುತ್ತೇನೆ.

ಶ್ರೀ ಕೆ.ಎನ್.ನಾಗೇಗೌಡ (ಬೃಹತ್ ನೀರಾವರಿ ಸಚಿವರು): ಮಾನ್ಯ ಅಧ್ಯಕ್ಷರೆ, ಇನ್ನು ಒಂದು ಗಂಟೆಯೊಳಗೆ ಉತ್ತರವನ್ನು ಒದಗಿಸಿಕೊಡುತ್ತೇನೆ.

ಅಧ್ಯಕ್ಷರು: ಒಳ್ಳೆಯದು. ಡೈನಾಮಿಕ್ ಮಿನಿಸ್ಟರ್ ಅಂದರೆ ಹೀಗಿರಬೇಕು.

**(ಇ) ಬೆಂಗಳೂರು ನಗರದ ಉತ್ತರ ಮತ್ತು ಪಶ್ಚಿಮ ಪ್ರದೇಶಗಳಲ್ಲಿ ಕುಡಿಯುವ ನೀರಿಗೆ ತೊಂದರೆ**

ಶ್ರೀ ಎಸ್.ಸುರೇಶ್ ಕುಮಾರ್ (ರಾಜಾಜಿನಗರ): ಸನ್ಮಾನ್ಯ ಸಭಾಧ್ಯಕ್ಷರೆ, ತಮ್ಮ ಮೂಲಕ ಬೆಂಗಳೂರು ನಗರಾಭಿವೃದ್ಧಿ ಸಚಿವರ ಗಮನಕ್ಕೆ ತರುವುದೇನೆಂದರೆ, ಬೆಂಗಳೂರು ನಗರದ ಉತ್ತರ ಮತ್ತು ಪಶ್ಚಿಮ ಪ್ರದೇಶಗಳಲ್ಲಿ ಕಳೆದ 15-20 ದಿವಸಗಳಿಂದ ಕುಡಿಯುವ ನೀರಿಲ್ಲದೆ ಜನ ತತ್ತರಿಸುತ್ತಿದ್ದಾರೆ. ವಿಶೇಷವಾಗಿ ರಾಜಾಜಿನಗರ, ಪಶ್ಚಿಮ ಕಾರ್ಡ್ ರಸ್ತೆ, ಮಹಾಲಕ್ಷ್ಮಿ ಬಡಾವಣೆ ಮತ್ತು ಬಸವೇಶ್ವರನಗರ ಈ ಪ್ರದೇಶಗಳಲ್ಲಿ ಕುಡಿಯುವ ನೀರಿಲ್ಲದೆ ತೀರಾ ಹಾಹಾಕಾರ ಪರಿಸ್ಥಿತಿ ಉಂಟಾಗಿದೆ. ಅಕಸ್ಮಾತ್ ನೀರು ಬಂದರೂ ಕೂಡ ಹುಳುಗಳಿಂದ ಕೂಡಿರುವ ಕಲುಷಿತ ನೀರು ಆದಾಗಿರುತ್ತದೆ. ಎರಡು ದಿವಸಕ್ಕೆ ಒಂದು ಸಾರಿ ನೀರು ಕೊಡುತ್ತೇವೆಂದು ಹೇಳಿರುವ ಜಲಮಂಡಳಿಯವರು ಇವತ್ತಿನ ದಿವಸ ಹತ್ತು ದಿವಸ ಆದರೂ ಜನಗಳಿಗೆ ನೀರು ಕೊಡುತ್ತಿಲ್ಲ. ಮಾರ್ಚ್ 10ನೇ ತಾರೀಖಿಗೆ ಈ ಸ್ಥಿತಿ ಆದರೆ, ಏಪ್ರಿಲ್, ಮೇ ಮತ್ತು ಜೂನ್ ತಿಂಗಳಲ್ಲಿ ಯಾವ ಸ್ಥಿತಿಗೆ ಬರಬಹುದು? ನನಗೆ ಬಂದಿರುವ ಖಚಿತ ಮಾಹಿತಿ ಪ್ರಕಾರ ತಿಪ್ಪಗೊಂಡನಹಳ್ಳಿ ಕೆರೆಯಿಂದ ಸರಬರಾಜಾಗುತ್ತಿದ್ದ ನೀರನ್ನು ಇವತ್ತು ರಾತ್ರಿ ಅಥವಾ ನಾಳೆಯಿಂದ ಬಂದ್ ಮಾಡುತ್ತಾರೆಂದು ತಿಳಿದುಬಂದಿದೆ. ಈ ಒಂದು ಹಿನ್ನೆಲೆಯಲ್ಲಿ ಆ ಭಾಗದ ಜನಕ್ಕೆ ನೀರು ಕೊಡುವುದಕ್ಕೆ ಜಲ ಮಂಡಳಿ ಏನು ಕಾರ್ಯಕ್ರಮ ಹಾಕಿಕೊಂಡಿದೆ?

ಶ್ರೀ ಅನಂತ್ ನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೆ, ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಪ್ರತಿ ದಿವಸ 30 ದಶ ಲಕ್ಷ ಗ್ಯಾಲನ್ ನೀರು ಸರಬರಾಜಾಗುತ್ತಿತ್ತು. ಆದರೆ, ಕಳೆದ ಮೂರ್ನಾಲ್ಕು ವರ್ಷಗಳಿಂದ ನೈರುತ್ಯ ಮತ್ತು ಈಶಾನ್ಯ ವಲಯದಲ್ಲಿ ಮಳೆಯ ವೈಪರೀತ್ಯದಿಂದ ಇಂದಿನ ಪರಿಸ್ಥಿತಿಗೆ ಕಾರಣವಾಗಿದೆ. ಆದುದರಿಂದ ಮಾನ್ಯ ಸದಸ್ಯರು ಹೇಳಿರುವ ಬಸವೇಶ್ವರನಗರ ಹಾಗೂ ನಗರದ ಪಶ್ಚಿಮ ಬಡಾವಣೆಗಳಿಗೆ ಕಾವೇರಿ ನದಿ ಮೂಲದಿಂದ ಪ್ರತಿ ದಿವಸ 50 ದಶ ಲಕ್ಷ ಗ್ಯಾಲನ್ ನೀರು